Reg No. M 1299 (Founded 1917) Daily & Weekly

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಸ್ಥಾನದ ಸುದ್ದಿಗಳು

ಈಚೆಗೆ ಚೀಲೂರಿನಲ್ಲಿ ಮಳೆ ಬಂದಾಗ ಬಿದ್ದ ಒಂದು ಆನೆಕಲ್ಲು 35 ಅಡಿ ಅಡ್ಡಳತೆಯುದಾಗಿದ್ದಿತೆಂದು ತಿಳಿಯಬಂದಿದೆ.

ರಾಜಮಂತ್ರ ಪ್ರವೀಣ ಶ್ರೀ ಎ. ವಿ. ರಾಮನಾಥಸ್ವರು ಭರತಪುರದ ದಿವಾನಗಿರಿಗೆ ರಾಜೀನಾಮೆ ಕೊಟ್ಟಕಿಂದು ವದಂತಿ ಹಬ್ಬಿದೆ.

ಬೆಂಗಳೂರಿನ [illegible] ಸಹಾಯಕ್ಕೆ ಅಲ್ಲಿನ [illegible] ರೂ 5000 ದಾನಾ ಮಾಡಿರುತ್ತಾರೆ.

ಮೈಸೂರು ನ್ಯಾಯವಿಧಾಯಕ ಸಭೆಯ ಅಧ್ಯಕ್ಷರ ಚುನಾವಣೆಯು ಜೂನ್ 21 ರಲ್ಲೂ, ಉಪಾಧ್ಯಕ್ಷರ ಚುನಾವಣೆಯು ಜೂನ್ 26 ರಲ್ಲೂ ನಡೆಯತಕ್ಕದ್ದೆಂದೂ ಸರ್ಕಾರಿ ಆಜ್ಞೆಯಾಗಿದೆ.

ಬೆಂಗಳೂರು ಮಲ್ಲೇಶ್ವರದಲ್ಲಿ ಒಂದು ಭಾರಿ ಜನತಾ ಆಸ್ಪತ್ರೆಯನ್ನು ಕಟ್ಟಿಸುವ ಏರ್ಪಾಡು ಮಾಡುತ್ತಿದ್ದಾರೆ.

ಮೈಸೂರು ಕಾಂಗ್ರೆಸ್ ವಿಶೇಷ ಅಧಿವೇಶನವು ಮೇ 12 ಮತ್ತು [illegible] ಮುಂದರವರಸಲಾಗಿದೆ-

ಶ್ರೀ ಎಂ. ಎನ್. ಆನಂದಾಳ್ವಾರ್‌ರನ್ನು 1-6-45 ರಿಂದ ನಡೆಯುವ ಪ್ರ. ಪ್ರ. ಸಭೆಯು ಏರ್ಪಾಡುಗಳನ್ನು ನಡೆಸಲು ಸ್ಪೆಷಲ್ ಡ್ಯೂಟಿ ಆಫೀಸರಾಗಿ ನಿಯುಕ್ತಿಸಲ್ಪಟ್ಟಿರುವರು.

ಹಾಸನದಲ್ಲಿ ಈ ತಿಂಗಳು 25–26 ರಲ್ಲಿ ಸಂಸ್ಥಾನಾಮಳಿ ಜಿಲ್ಲಾ ಬೋರ್ಡು ಅಧ್ಯಕ್ಷ ಉಪಾಧ್ಯಕ್ಷರುಗಳ ಸಮ್ಮೇಳನವು ನಡೆಯುವುದು.

ಮೈಸೂರು ನಗರದ ಜೈನ ಸಂಘದವರು ಈ ತಿಂಗಳು ತಾ || 25 ರಲ್ಲಿ ಟೌನ್ ಹಾಲಿನಲ್ಲಿ ಶ್ರೀ ಮಹಾವೀರ ಜಯಂತಿಯನ್ನು ಈಗ ಮೈಸೂರಿನಲ್ಲಿರುವ ಜೈನ ಗುರು ಗಣೇಶಲಾಲ್‌ಜಿಯವರ ಸಮ್ಮುಖದಲ್ಲಿ, ಪೌರಸಭಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬ್ರೊಂಭೋರೆಯವರ ಅಧ್ಯಕ್ಷತೆಯಲ್ಲಿ ನಡೆಸುವರೆಂದು ಸಂಘದ ಪ್ರೆಸಿಡೆಂಟರು ತಿಳಿಸುತ್ತಾರೆ.

Stop Press

ಜರ್ಮನಿ ಛಿದ್ರವಾಗಿದೆ. ಜರ್ಮನಿ ಮುಂದುಗಾರಿಕೆ ನಿಂತಹಾಗೆಯೇ? ಬರ್ಲಿಗೆ 28 ಮೈಲಿಯಲ್ಲಿ ರಷ್ಯ ಸೇನೆ ಬಂದಿದೆ.

ನಾಜೀ ರಾಯಭಾರಿ ಹಾಲೆಂಡಿಗೆ ಓಡಿಹೋದನು.

ರಷಿಯಲ್ಲಿ 48 ನಿಮಿಷಗಳಲ್ಲಿ ಮನೆ ಕಟ್ಟಿ ಮುಗಿಸುತ್ತಿದ್ದರು!

ರೂಸ್ವೆಲ್ಟರ ಉಯಿಲು ಹೊರಪಟ್ಟಿದ್ದು ಹೆಂಡತಿಯು ತನಗೆ ಬೇಕಾದಷ್ಟನ್ನು ತಾ ಇಟ್ಟುಕೊಂಡ ಶನಕ ಅನುಭವಿಸಬಹುದು. ಮಕ್ಕಳಿಗೆ ಒಬ್ಬೊಬ್ಬರಿಗೆ 5 ರಲ್ಲಿ 1 ಭಾಗ.

ಜರ್ಮನ್ ರಾಜಧಾನಿ ಬದಲಾವಣೆ

ಹಿಟ್ಲರ್ ತನ್ನ ರಾಜಧಾನಿಯನ್ನು ಇನ್ಸ್‌ಬ್ರುಕ್‌ಗೆ ಬದಲಾಯಿಸಿರುವನು

ಹಿಟ್ಲರ್ ಸೈತಾನ್

ಅನ್ಯ ರಾಜ್ಯಗಳ ಆಕ್ರಾಂಕ್ಷೆಯಿಂದ ಅವರಿಸಲ್ಪಟ್ಟು ಕಯುಕ್ಕಿಯಿಂದ ಕೂಡಿದನ್ನಕ್ಕೆ ವಿಧವೆಯಾದ ಜಪಾನಿನ ಸಹಾಯವು ದೊರೆಯಿತೆಂದು ವಿಜೃಂಭಿಸಿ, ಫಿರಂಗಿಯನ್ನು ಹಾರಿಸಿದೆ. ನನ್ನ ಮಾತಿಗೆ ಎದುರು ಹೇಳುವವರು ಯಾರೂ ಇಲ್ಲವೆಂದು ಗರ್ವಪಟ್ಟು ಅಪಕೀರ್ತಿಯ ಪಾಲಾದೆ. ಅಮೇರಿಕಾ, ಬ್ರಿಟಿಷ್, ರಷ್ಯಾಗಳನ್ನು ಎದುರಿಸಿ ಗಂಗೆಯಲ್ಲಿ ಕಲೆಯಲು ಎಳೆಸಿರುವೆ. ನಿನ್ನಿಂದ ಯೂರೋಪಿನ ಅನೇಕ ಸಣ್ಣ ರಾಜ್ಯಗಳು ಕಂಗೆಟ್ಟು ಕಾಡುತಾಲಾದವು. ಹಿಟ್ಲರನೇ! ನೀನು ಸೈತಾನನಂತೆ ಅವತಾರವೆತ್ತಿರುವೆಯಲ್ಲೋ!

ಫಲಭರಿತವಾದ, ಅನ್ನವಸ್ತ್ರಗಳಿಗೆ ಕೊರತೆಯಿಲ್ಲದ ಭಾರತ ದೇಶವೂ ನಿನ್ನಿಂದ ಕಷ್ಟಗಳ ಪಾಲಾಗಬೇಕಾಗಿ ಬಂದಿತು. ಸ್ವೇಚ್ಛೆಯೆಂಬ ನೆ ಸಂತೋಷದಿಂದ ಜೀವನವನ್ನು ಮಾಡುತ್ತಿದ್ದ ರಷ್ಯಾ ದೇಶವು ಮಹಾರಣರಂಗವಾಯಿತು. ಜಪಾನೀಯರು ಯುದ್ಧದಲ್ಲಿ ಹೋರಾಡುವ ವೀರಾಧಿವೀರರಾದರು. ನೀತಿ ದೂರರಾದ ಜರ್ಮನರು ಮರಣಹೊಂದಲ್ಲಿ ತಸ್ತರಾಗುತ್ತಿರುವರು. ಜರ್ಮನೀ ರಾಜ್ಯವನ್ನೆಲ್ಲಾ ನಾಶಗೊಳಿಸಿ, ಜನಗಳಿಗೆ ಅನ್ನವಿಲ್ಲದಂತೆ ಮಾಡಿ ಸುಟ್ಟು ಸಾಯಿಸಿದ ಮಹಾಭೂತ ರೂಪನೇ, ಕಠೋರ ಹೃದಯನೇ, ನಿಕೃಷ್ಟನೇ!

ಹಸೀ ಕಳ್ಳನಂತೆ ನಿನ್ನನ್ನು ಅನುಸರಿಸಿರುವ ಮುಸೋಲನಿಯು ನಿನ್ನ [illegible] ತಲೆಯ ಮೇಲೆ ಮುಸುಕನ್ನು ಹಾಕುವನು. ಪ್ರಬಲನಾದ ಸ್ಟಾಲಿನ್ ನಿನ್ನ [illegible] ಗಳಿಗೆ ತಿವಿದು ಎಲ್ಲವನ್ನೂ 'ಗುಟಕಾಯು ಸ್ವಾಹಾ' ಮಾಡುವನು. ಪ್ರಮುಖರಾದ ಅಮೇರಿಕನ್ನರ ಸಹಾಯದಿಂದ ಚರ್ಚಿಲ್ ನಿನ್ನ ಬೆನ್ನಿನ ಮೇಲೆ ಏಟು [illegible] ಮಾಡುವನು. ನೀನು ನಂಬಿದ ಫಾಸಿಸ್ಟ್ ವರ್ಗದವರು ಒಟ್ಟಿಗೆ ಕಲೆತು ನಿನ್ನನ್ನು [illegible] ಯಲ್ಲಿ ಹೂಕುಹಾಕುವರು. ನಿನ್ನನ್ನು ಕಾಪಾಡದೆ ಬಿಡುವುದಿಲ್ಲ. ಆಗ ನಿನ್ನ [illegible] ಪೆಗಳೆಲ್ಲಾ ದೂರವಾಗುವುವು. ಇನ್ನುಮುಂದೆ ನಿನ್ನ ಕುತಂತ್ರಗಳೂ, ರಾಕ್ಷಸ ಕೃತ್ಯಗಳೂ ಮುಂಬರಿಯಲಾರವು. ಹೆಚ್ಚು ಬುದ್ಧಿ ಖರ್ಚು ಮಾಡಿ [illegible] ರಾದರೂ ಬ್ರಿಟಿಷರ ಶರಣಹೊಕ್ಕು ಉದ್ಧಾರನಾಗು ನೀಚನೇ!

ಜನ್ಮಭೂಮಿ ಪತ್ರಿಕೆ

ಬೆಜವಾಡಾದಲ್ಲಿ ಶೀಘ್ರದಲ್ಲಿಯೇ ಜನ್ಮಭೂಮಿ ಎಂಬ ತೆಲಗು ದಿನ ಪತ್ರಿಕೆಯು ಶ್ರೀ ಮುಜೀಲಿಯಾ ಕೃಷ್ಣ ಮೂರ್ತಿಯವರ ಸಂಪಾದಕತ್ವದಲ್ಲಿ ಪ್ರಕಟಿಸಲ್ಪಡುವುದೆಂದು ತಿಳಿಯಬಂದಿದೆ.

ನೋಟುಗಳ ಬೆಲೆ

ಜಪಾನ್ ನೋಟುಗಳನ್ನು ಚೀನಾದ [illegible] ಕರೆನ್ಸಿಕ್ಕಿಂತ ಕಮ್ಮಿಯಾಗಿ ನೋಡುವುದು. ಒರಿದು ಕಾಸಿಗೆ [illegible] 2 ಜಪಾನ್ ಡಾಲರ್.

ಮಿತ್ರರ ಸಾಹಸ

ಈಗ ಮಿತ್ರರು ಆಕ್ರಮಿಸಿರುವ ಜರ್ಮನ್ ರಾಜ್ಯಗಳಲ್ಲಿ ಬಾಲಕರ ಪುಸ್ತಕಗಳನ್ನು ಮುದ್ರಿಸಿ, ಪಾಠಹೇಳುತ್ತಿರುವರು. ಇದುವರೆಗೆ ಜರ್ಮನಿಯ ಪುಸ್ತಕಗಳಲ್ಲಿ ಲಿಸ್ಟ್‌ದ ಪಾಠಗಳನ್ನು ಸಹಾ ನಾಜೀ ರೀತಿಯಲ್ಲೇ ಹೇಳಿಕೊಡುತ್ತಿದ್ದರಂತೆ.

ದೋದಿ ರವಾನೆಯಿಲ್ಲ

ಯುದ್ಧಾನಂತರ ಭಾರತಕ್ಕೆ ಆಸ್ಟ್ರೇಲಿಯಾ ಗೋಧಿಯು ಸರಬರಾಜಿಲ್ಲ. ಅದೆಲ್ಲಾ ಯೂರೋಪಿಗೆ ರವಾನೆಯಾಗುತ್ತೆ.

ಫ್ರಿಸ್ಕೋ ಸಮ್ಮೇಳನ

ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನದಲ್ಲಿ ಕಾಗದಪತ್ರಗಳೆಲ್ಲಾ ಇಂಗ್ಲೀಷು, ಫ್ರೆಂಚು ಮತ್ತು ಸ್ಪ್ಯಾನಿಷ್ ಭಾಷೆಗಳಲ್ಲಿ ಬರೆಯಲಾಗುವುದು.

ಅಪ್ಪಣೆ ದೊರೆತಿಲ್ಲ

ಭಾರತೀಯ 3 ಮಂದಿ ಸಂಪಾದಕರನ್ನು ಸ್ಯಾನ್‌ಫ್ರಾನ್ಸಿಸ್ಕೋಗೆ ಕಳುಹಿಸಲಾಗುವುದಿಲ್ಲವೆಂದು ಸರಕಾರದವರು ತಿಳಿಸಿದ್ದಾರೆ.

ಕಟ್ಟಾಜ್ಞೆ

ಜರ್ಮನಿಯ ನ್ಯೂರೆಂಬರ್ಗ್ ನಗರ ಅಮೇರಿಕನ್ನರ ವಶವಾಯಿತು. ದಿನಕ್ಕೆ 45 ಸಾವಿರ ಮಂದಿಯಂತೆ ಜರ್ಮನರು ಶರಣಾಗತರಾಗುತ್ತಿರುವರು. ಪೂರ್ವದಿಕ್ಕಿನಿಂದ ಆಪಾಯ ಹೆಚ್ಚುತ್ತಿಡೆಯೆಂದು ಹಿಟ್ಲರ್ ಹೇಳಿಕೆ ಕೊಟ್ಟಿರುವನು. ಬರ್ಲಿನ್ ಪತನವಾದನಂತರ ಮಿತ್ರರು ಜರ್ಮನಿಗೆ ಒಂದು ಕಟ್ಟಾಜ್ಞೆಯನ್ನು ಕೊಟ್ಟು ಆಗ ಜರ್ಮನರೆಲ್ಲಾ ಶರಣಾಗಬೇಕು ತಪ್ಪಿದಲ್ಲಿ ಸಿಕ್ಕಿದ ಕಡೆ ಕೊಲ್ಲಲ್ಪಡುವರೆಂದು ಹೇಳಲಾಗಿದೆ.

ಪೋಲೀಸ್ ಕಾನ್ಸ್ಟೆಬಲ್‌ನ ವಿಚಿತ್ರ ವರ್ತನೆ

ಮುಸ್ತಾಫಾ ಎಂಬ ಮೂವರು ಪೋಲೀಸ್ ಕಾನ್ಸ್ಟೆಬಲು ಟಿಂ ಕಾಸಿಯಿಂದ ರೈಲು ಹೊರಟಕೂಡಲೇ ಸ್ಪೇಷಲ್ ಕೈಕಂಬ ತಲಪುದರೊಳಗಾಗಿ ಸರಪಣಿ ಎಳೆದನು. ಗಾಡಿ ನಿಂತಿತು. ರೈಲ್ವೆ ಪೋಲೀಸಿನವರು ಇವನನ್ನು ಪತ್ತೆಹಚ್ಚಿ ಸ್ಪೇಷನಿಗೆ ಕರೆದುಕೊಂಡು ಹೋಗಿ, ವಿಚಾರಿಸಿದಲ್ಲಿ — ತಾನೊಬ್ಬ ಪೋಲೀಸ್ ಕಾನ್ಸ್ಟೆಬಲು, ತನಗೆ ವರ್ಗ ಮಾಡಿದರು ತಾನು ಹೋಗಲಿಲ್ಲವಾಗಿ ಕೆಲಸದಿಂದ ವಜಾಮಾಡಿದರು ; ತಾನು ಇನ್‌ಸ್ಪೆಕ್ಟರ್, ಸೂಪರೆಂಟ್, ಇನ್‌ಸ್ಪೆಕ್ಟರ್ ಜನರಲ್, ಗೌರ್ನರ್, ವೈಸರಾಯ್, ಇವರಿಗೆ ಅರ್ಜಿಕೊಟ್ಟು ಮೊಹ್ತಾ ನೋಡಿದರೂ ಪ್ರಯೋಜನವಾಗಲಿಲ್ಲ, ತನಗೆ ನ್ಯಾಯ ದೊರೆಯಲಿಲ್ಲ ; ಅದಕ್ಕಾಗಿ ಅಧಿಕಾರಿಗಳ ಗಮನಕ್ಕೆ ಬರಲೆಂದು ಹೀಗೆ ಮಾಡಿದ್ದೇನೆ. ವೈಸರಾಯರ ಮುಂದೆ ತನ್ನ ದೂರನ್ನು ಹೇಳಲು ಬಹಳ ಪ್ರಯತ್ನಿಸಿದೆ. ಪ್ರಯೋಜನವಾಗಲಿಲ್ಲ. ಪೈಕ್ರಾಫ್ಟ್ ಭವನದ ಮುಂದೆ ಸತ್ಯಾಗ್ರಹ ಮಾಡಿದೆ. ಪೈಕ್ರಾಫ್ಟ್ ಅವರು ತನ್ನ ಕಷ್ಟ ಪರಿಹಾರ ಮಾಡುತ್ತೇವೆಂದು ಭರವಸೆ ಕೊಟ್ಟರು ಎಂದು ಹೇಳಿದನು. ಇವನ ಹೆಸರು ವಿಳಾಸಗಳನ್ನು ಬರೆದುಕೊಂಡು ಇವನನ್ನು ಬಿಟ್ಟುಬಿಟ್ಟ ; ಮಾರನೇ ದಿವಸ ತಾಲ್ಲೋಕು ಆಫೀಸಿಗೆ ಮುಂದೆ ಸಿಂತು ಗದ್ದಲ ಮಾಡುತ್ತಾ ಅಧಿಕಾರಿಗಳನ್ನು ಹೊನ್ನಾವರ ಬೈಪಾಸ್ ಪೋಲೀಸಿನವರು ಎಷ್ಟು ಹೇಳಿದರೂ ಕೇಳಲಿಲ್ಲವಾಗಿ ದಿನ್ನಗಿರಿಮಾಡಿ ಪ್ಯಾಜೆಸ್ಟ್ರೇಟರ ಮುಂದೆ ನಿಲ್ಲಿಸಿದರು. ಅಲ್ಲಿಯೂ ತನ್ನನ್ನು ಹಿಡಿದಿರುವ ಸೆಕ್ಷನ್ ತಕ್ಷೀರಿಗೆ ಜಾಮೀನಿನ ಮೇಲೆ ಬಿಡತಕ್ಕದ್ದೆಂದೂ, ತನ್ನನ್ನು ಜಾಮೀನಿನ ಮೇಲೆ ಬಿಡಬೇಕೆಂದೂ ವಾದಿಸಿದನು. ಆದರೆ ಮ್ಯಾಜಿಸ್ಟ್ರೇಟರು ಜಾಮೀನಿನ ಮೇಲೆ ಬಿಡಲಿಲ್ಲ. ಈ ವಿಷಯವು ಹೇಗೆ ಪರ್ಯವಸಾನವಾಗುವುದೋ ಮುಂದೆ ನೋಡಬೇಕು.



ಐ.ಜೆ. ಹಾಲ್, ಸರಾಫ್‌ಅಂಗಡಿ ರಸ್ತೆ ಬೀದಿ, ಮೈಸೂರು

At Ranjit

Pagli Duniya

ರಣಜಿತ್ ಟಾಕೀಸಿನಲ್ಲಿ

5 ನೇ ಅಮೋಘ ವಾರ

ಪಗಲಿ ದುನಿಯಾ

(ಹಿಂದಿ)

ನುಮ್ಮಾಜ್ ಶಾಂತಿ ಮೋತಿಲಾಲ್

ಷೇಕ್ ಮುಕ್ತಾರ್ ಪಾತ್ರವಹಿಸಿರುವರು

Edited, Printed and published by M. S. Krishna Rao, at the Satvavadi Press, Chamaraja Agrahar, Mysore

For Good Printing—

L. N. Press

Sriramp et MYSORE

AT OPERA — From 12-4-45

POOMPAVAI

'ಪೊಂಪಾವೈ'

ಪಾತ್ರ - ರಾಮಸ್ವಾಮಿ, ಜೀವರತ್ನಂ, ವಸುಂಧರಿ, ಕೃಷ್ಣ.

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಶಕ್ತಿಸುಧಾ ಗಂಟಿ ಚಾಮರಾಜಪುರಂ ಮೈಸೂರು.

ಬೆಲೆ ಡಬ್ಬಿಯೊಂದಕ್ಕೆ ಒಂದು ರೂಪಾಯಿ.



ಬ್ರಿಟಿಷರ ಒಂದು ಸೈನ್ಯದ ವಾಹನಗಳು ಇಟಲಿಯ ಬೆಟ್ಟದಲ್ಲಿ ಹೋಗುತ್ತಿರುವುವು. ಈ ಚಿತ್ರದಲ್ಲಿ ಸೈನಿಕರು ವಿಶ್ರಾಂತಿ ತೆಗೆದುಕೊಂಡು ಮುಂದೆ ಕಾರ್ಯಾಚರಣೆಗೆ ಹೋಗುತ್ತಿರುವುದನ್ನು ಸಹ ಕಾಣಬಹುದು.